ಹೇಳುತ್ತಾನೆ. ಬಿಜ್ಜಳನ ಕತ್ತಿ ಯಾವಾಗಲೂ ರಕ್ತವನ್ನೂ, ಹೊಗೆಯನ್ನೂ ಉಗುಳುತ್ತಿತ್ತೆಂದು ಶಾಸನವೊಂದು ಹೇಳುತ್ತದೆ. ಇನ್ನೂ ಇಂಥವು ಎಷ್ಟೋ!

ನ್ಯೂಯಾರ್ಕ್ ಮ್ಯೂಸಿಯಂನ ನೆಲ ಮಹಡಿಯ ಆರಂಭಿಕ ಶಿಲ್ಪ ಮಾದರಿಗಳಿಗೂ, ಜಗತ್ತಿನೆಲ್ಲೆಡೆ ನಾವು ಕೇಳಿಸಿಕೊಂಡುಬಂದಿರಬಹುದಾದ ಮನುಷ್ಯ ಸಮೂಹ ನಾಶದ ಬರ್ಬರ ಸಂಗತಿಗಳಿಗೂ ಅಂಥದೇನೂ ವ್ಯತ್ಯಾಸವಿಲ್ಲವೆನಿಸಿತು. ಯಾವ ದೇಶದಲ್ಲಿ ಯಾವನೇ ಪರಾಕ್ರಮಿ ರಾಜ್ಯಸಾಧನೆಗೈಯ್ಯಲು ದಿಗ್ವಿಜಯ ಹೊರಟು ಶತ್ರು ಸೈನಿಕರ ರುಂಡವನ್ನು ಯಾವ ಕ್ರಮದಲ್ಲಾದರೂ ಹಾರಿಸಿರಲಿ, ಅವರ ಪತ್ನಿಯರ, ಮಕ್ಕಳ ಭವಿಷ್ಯ ಹಾನಿಯ ಕಥೆ ಯಾವ ಬಗೆಯದು? ಸಾಯುತ್ತೇನೆಂದು ತಿಳಿದ ಪಿರಿಯಾಪಟ್ಟಣದ ಪಾಳೆಯಗಾರ ವೀರರಾಜು ಹಿಂದಿನ ದಿನ ತನ್ನ ಮೂವರು ಹೆಂಡತಿಯರನ್ನೂ, ಮಗುವನ್ನೂ ಕೊಂದನೆಂದು ಅವನ ಮೇಲಿನ ಕಥನ ಕಾವ್ಯ ಹೇಳುತ್ತದೆ. ಬಿಜಾಪುರದ ಸುಲ್ತಾನನೊಬ್ಬ ನಾಳೆ ಯುದ್ಧದಲ್ಲಿ ಸಾಯುತ್ತೇನೆಂದು ತಿಳಿದು ಹಿಂದಿನ ದಿನ ತನ್ನ ಅರವತ್ತು ಜನ ರಾಣಿಯರನ್ನು ತಾನೇ ಕೈಯ್ಯಾರೆ ಕೊಂದನಂತೆ. ಆ ರಾಣಿಯರ ಸಮಾಧಿಗಳು ಬಿಜಾಪುರದ ಹೊರವಲಯದಲ್ಲಿ 'ಸಾಟ್ ಕಬರ್' ಎಂದು ಕರೆಸಿಕೊಂಡಿವೆ.

ನ್ಯೂಯಾರ್ಕಿನ ವಸ್ತು ಸಂಗ್ರಹಾಲಯದಲ್ಲಿ ಪರಾಕ್ರಮಿಯಂತಿರುವವನು ಹಿಡಿದ ರುಂಡದ ಕೂದಲಿಗೆ ಹಾವಿನ ರೂಪ ಕೊಡಲಾಗಿದೆ. ಈ ಬೀಭತ್ಸ ರೂಪದಿಂದ ಅತ್ತ ನೋಡಿದರೆ ಬೆತ್ತಲೆ ನಿಂತ ನಸು ಕಪ್ಪು ವರ್ಣದ ಮೂರು ಜನ ಹೆಣ್ಣುಮಕ್ಕಳು ಪರಸ್ಪರ ಅಪ್ಪಿಕೊಂಡಿದ್ದಾರೆ. ಮಧ್ಯ ನಿಂತವಳು ದಕ್ಷಿಣಕ್ಕೆ ಮುಖ ಮಾಡಿ ನಿಂತಿದ್ದರೆ, ಅತ್ತಿತ್ತಲ ಇಬ್ಬರು ಉತ್ತರಕ್ಕೆ ಮುಖ ಮಾಡಿದ್ದಾರೆ. ಬರಿಯ ಬೆತ್ತಲೆ ಮುಂಡವಿರುವ ಈ ಶಿಲ್ಪಗಳ ಭಾವ ಯಾವ ಬಗೆಯದು ಎಂದು ನೋಡಹೋದರೆ ಆ ಹೆಂಗಸರಿಗೆ ಮುಖವೇ ಇಲ್ಲ! ಇವರು ಒಬ್ಬರಿಗೊಬ್ಬರು ತೋಳಿಂದ ಅಪ್ಪಿಕೊಂಡಿದ್ದರೂ ಮನೋಭಾವ ಮಾತ್ರ ದೂರ ದೂರ, ಬೇರೆ ಬೇರೆ ಇರಬಹುದು.

ಮೂವರು ಹೆಂಗಸರ ವಿಗ್ರಹದ ನಂತರ ಅತ್ತತ್ತಲೇ ಒಂದು ಪ್ರಣಯ ಭಂಗಿಯ ಶಿಲ್ಪ ಕಣ್ಣಿಗೆ ಬಿತ್ತು. ಇದು ಭಾರತೀಯ ಮೂಲದ್ದಾಗಿತ್ತು. ಹಾಗೆ ನೋಡಿಕೊಂಡರೆ ಒಟ್ಟು ವಸ್ತು ಸಂಗ್ರಹಾಲಯದ ಅನೇಕಾನೇಕ ಶಿಲ್ಪ, ಕಾಷ್ಠ ಮತ್ತು ಚಿತ್ರ ಕಲಾಕೃತಿಗಳು ಭಾರತದವೇ ಆಗಿದ್ದವು. ಆದಾಗ ಕಂಡ ಸ್ತ್ರೀ ಪುರುಷ ಸಂಬಂಧದ ಶಿಲ್ಪವನ್ನು ನಾನು ಕರ್ನಾಟಕದ ದೇವಾಲಯಗಳಲ್ಲಿ ಮತ್ತು ಅದರ ಪ್ರತಿಕೃತಿಯನ್ನು ಕಾಗದ ಚಿತ್ರಗಳಲ್ಲಿ ಕಂಡದ್ದುಂಟು. ಈ ಚಿತ್ರದ ವರಸೆ ಹೆಣ್ಣು ಗಂಡಿನ ಮೈಥುನದ ಆತುರ ಹೇಳುವುದಕ್ಕಿಂತ ಮುಂದಾಗಿ ಅವರಿಬ್ಬರ ಅಂತರಂಗ ಸಮರಸ ಭಾವವನ್ನು ಹೊರಸೂಸುವಂತಿತ್ತು. ಹೆಣ್ಣಿನ ಕಡೆಗೆ ಪುರುಷನ ನೋಟ ಆರ್ದ್ರತೆಯಿಂದ, ಮಾರ್ದವತೆಯಿಂದ ಕೂಡಿತ್ತು. ಈ ವಿಗ್ರಹ ಕಂಡ ನನಗೆ ನೆನಪಿಗೆ ಬಂದದ್ದು ನಮ್ಮಲ್ಲಿಯ ಕೃಷ್ಣ-ರಾಧೆಯರ ಭಾವಭಂಗಿಯ ಶಿಲ್ಪ. ಸ್ವಲ್ಪ ಬೇಗ ಕಂಡರೆ ಇದೇ ಕೃಷ್ಣ ರಾಧೆಯರ ವಿಗ್ರಹವೇನೋ ಅನಿಸಿ ಆಮೇಲಾಮೇಲೆ ಹೆಣ್ಣು ಕೊಂಚ ಮೇಲೆತ್ತಿರುವ ಪಾದದಿಂದಾಗಿ ಅದು ಹಾಗಿಲ್ಲವೆನಿಸಿತು. ಈ ಸ್ತ್ರೀಪುರುಷ ರೂಪದ ಅನತಿ ದೂರದಲ್ಲಿ ಕಂಡದ್ದು ಗ್ರೀಕ್ ಶೈಲಿಯ ತಾಯಿ ಮಗುವಿನ ಶಿಲ್ಪ. ಅದರ ಪಕ್ಕದಲ್ಲೇ ತಾಯ ಎದೆ ಹಾಲು ಸವಿಯುತ್ತಿರುವ ಮಗುವಿನ ಮತ್ತೊಂದು ಲೋಹ ವಿಗ್ರಹ. ಇದು ಎಲ್ಲ ಬಗೆಯ ಕ್ರೌರ್ಯ, ಸಂಘರ್ಷ, ಪ್ರೇಮಕಾಮ ಇದಕ್ಕೆಲ್ಲ ವಿರಾಮವಿಟ್ಟಂತಿತ್ತು. ತಾಯಿಗೆ ಕೂಸನ್ನು ಅಪ್ಪಿ ಹಾಲೂಡಿಸುತ್ತಿರುವ ಅತೀವ ಆನಂದ. ಈ ವಿಗ್ರಹಕ್ಕೆ ಯಾವ ಆಭರಣದ ಅಲಂಕಾರವೂ ಇರಲಿಲ್ಲ. ಈ ಸ್ತನದಾಯಿನಿ ವಿಗ್ರಹ ಪುಟ್ಟದಾಗಿದ್ದಿತು ನಿಜ; ಆದರೆ ಅದು ಭಾವದಲ್ಲಿ ಮಾತ್ರ ಲೋಕವನ್ನೇ ತುಂಬಿಕೊಳ್ಳುವಂತಿತ್ತು.

ವಸ್ತು ಸಂಗ್ರಹಾಲಯದಲ್ಲಿ ಕಂಡ ಇನ್ನೊಂದು ಅತಿ ಕುತೂಹಲದ ಜಾಗ ಅಂದರೆ ಸ್ವಲ್ಪ ಎತ್ತರದಲ್ಲಿ ತುಂಬಾ ಇಕ್ಕಟ್ಟಾದ ಎರಡು ಗೋಡೆಗಳ ನಡುವಣ ಅಂತಃಸ್ಥಳ. ಅಲ್ಲಿ ಅದನ್ನು ಯಾರು ಹೇಗೆ ನಿರ್ಮಾಣ ಮಾಡಿದರೋ ಆಶ್ಚರ್ಯ! ಬಲು ಕಿರಿದಾದ ಒಂದೊಂದೇ ಹೆಜ್ಜೆ ಇಟ್ಟು ಸರಿಯಬೇಕಾದ ಆ ಸುರಂಗದಲ್ಲಿ ಶ್ರೀಧರ್ ಅವರು ನಿಂತ ಭಂಗಿಯಲ್ಲಿ ನೆಟ್ಟಗಲ್ಲ, ಅಡ್ಡಡ್ಡ ಸಾಗಿದರೆ ನಾನೂ ಹಿಂದಿನಿಂದ ಪ್ರವೇಶ ಮಾಡಿದೆ. ಶಿಲ್ಪ, ವಿಗ್ರಹ, ಚಿತ್ರಕಲೆ ಇನ್ನಿತರ ಅಸಂಖ್ಯಾತ ವಸ್ತುಮಾದರಿಗಳನ್ನು ವೀಕ್ಷಿಸಿಕೊಂಡು ಓಡಾಡುತ್ತಿದ್ದ ಪ್ರೇಕ್ಷಕ ಸಮೂಹ ಏನೂ ಕಾಣದ ಈ ಕತ್ತಲ ಸುರಂಗ ಮಾರ್ಗದತ್ತ ಎಡತಾಕುವಂತೆ ಕಾಣಲಿಲ್ಲ. ಇಷ್ಟಾಗಿ ಅಲ್ಲಿದ್ದ ಸಂಸಾರ